ನಾನು ಅವಳ ಬಳಿ ತುಂಬಾ ಸಲಿಗೆಯಿಂದ ಮಾತಾಡುವುದು ಎಷ್ಟೋ ಜನಕ್ಕೆ ಇಷ್ಟವಿರಲಿಲ್ಲ. 'ನನ್ನಂತಹ ಅಮಾಯಕಿಯನ್ನು ಅವಳು ಹಾಳು ಮಾಡಿಬಿಡುತ್ತಾಳೆ' ಎನ್ನುವ ಕಳಕಳಿ ಅವರದು. ಒಮ್ಮೆ ಲಲಿತಾ ನನಗೆ ನೇರವಾಗಿಯೇ, 'ಅವ್ಳು ಸರಿಯಿಲ್ಲ ಕಣೆ, ನೀನ್ಯಾಕೆ ಅವಳ ಹತ್ರ ಹಂಗೆ ಹಲ್ಕಿಸಿತಿಯಾ? ಸ್ವಲ್ಪ ಹುಷಾರು ಕಣೇ, ಅವ್ಳ ಜತೆ ಬಲೇ ಚೆನ್ನಾಗಿದ್ದೀಯಾ. ನಿಂಗೂ ಯಾರನ್ನಾದ್ರೂ ಹಾಕ್ಕೊಟ್ಟೋಳು' ಎಂದ ಮಾತಿಗೆ ನಾನು ಬರಿದೆ ನಕ್ಕಿದ್ದೆ. 'ನನಗೆ ಸರಿ ಯಾವುದು, ತಪ್ಪು ಯಾವುದು ಎಂದು ತಿಳಿಯುತ್ತೆ. ನಾನೇನು ಮುಗ್ಧೆಯಲ್ಲ' ಎಂದುಕೊಂಡು ಸುಮ್ಮನಾದೆ. ಲಲಿತಾ ಹಾಗೆ ಹೇಳಿದ ಮೇಲೆ ನನಗಂತೂ ಒಂದು ರೀತಿ ಇರುಸುಮುರುಸು. 'ಮಾತಿಗೆ ಮುಂಚೆ ಯಾಕೆ ಜನರು ಸರಿಯಲ್ಲಾಂತ ಹೇಳ್ತಾರೆ. ಯಾಕೆ ಯಾರು ತಾವೆಷ್ಟು ಸರಿ ಇದ್ದೀವಿ ಅಂತ ನೋಡಿಕೊಳ್ಳಲ್ಲ! ಇಷ್ಟಕ್ಕೂ ಸರಿಯಿಲ್ಲಾಂದ್ರೆ ಏನು? ನಲವತ್ತೈದು ದಾಟಿದ ಅವಳೇ ಈ ರೀತಿಯ ಸಂಬಂಧ ಇಟ್ಕೊಂಡಿರಬೇಕಾದರೆ, ಬೇರೆಯವರ ಬಗ್ಗೆ ಮಾತಾಡೋದು ಎಷ್ಟು ಸರಿ?' ಎಂದು ಎಷ್ಟು ಯೋಚಿಸಿದರೂ ಉತ್ತರ ಹೊಳೆಯಲಿಲ್ಲ. ನನಗೆ ಈ 'ಸರಿಯಿಲ್ಲ' ಪದದ ಅರ್ಥ ಹುಡುಕಿಯೇ ಸಾಕಾಗಿಬಿಟ್ಟಿದೆ. ಆದ್ದರಿಂದ ನನಗೆ 'ಸರಿಯಿಲ್ಲ' ಎನ್ನುವ ಪದ ಅಷ್ಟೊಂದು ಇಷ್ಟವಾಗಲ್ಲ. ಅವಳ ಜೊತೆಗಿನ ಸಲಿಗೆ ಜಾಸ್ತಿಯಾದಾಗ, ಪರಿಚಯವಿರುವವರೆಲ್ಲ ನನಗೆ ಬುದ್ಧಿ ಹೇಳುವವರೆ. ಒಮ್ಮೆ ಹನುಮಂತ ಎನ್ನುವ ಹುಡುಗ, 'ಅಕ್ಕ ಹುಷಾರು. ಅವ್ಳು ಸರಿಯಿಲ್ಲ' ಎನ್ನುವುದೇ! ನನಗಂತೂ ರೇಗಿಹೋಯಿತು. 'ಹಂಗಂದ್ರೆ ಏನು ನಿಮ್ಮ ಲೆಕ್ಕದಲ್ಲಿ? ನೀವು ಏನೂ ಮಾಡ್ದೆ ಅವ್ಳು ಕೆಟ್ಟೋದ್ಳ? ರಸ್ತೆಯಲ್ಲಿ ಹೋಗುವಾಗ ಬಾಯಿಗೆ ಬಂದಂತೆ ರೇಗಿಸಲು ಸರಿಯಿಲ್ಲದವ್ರು ಬೇಕು. ನಿಮ್ಗೆ ಮನಸ್ಸು ಬಂದಾಗ ಅನುಭವಿಸಕ್ಕೆ ಸರಿಯಿಲ್ಲದವ್ರು ಬೇಕು. ಮನೆಯಲ್ಲಿ ಹೆಂಡತಿ ಇದ್ರು ಗಂಡು ಅಂತ ತೋರ್ಸಕ್ಕೆ ನಿಮ್ಗೆ ನೀವು ಸರಿಯಿಲ್ಲಾಂತ ಹೇಳೋ ಹೆಣ್ಣು ಬೇಕು. ಅದೇ ಹಗಲಿನ ಹೊತ್ತು ಮಾತಾಡಿಸ್ಲಿಕ್ಕೆ ಆಕೆ ಸರಿಯಿಲ್ಲ, ಸೂಳೆ, ನಿಮ್ಮ ಮರ್ಯಾದೆಗೆ, ನಿಮ್ಮ ಘನತೆಗೆ ಕುಂದು ತರೋ ಕಳಂಕ ಅಲ್ವಾ? ಅವ್ಳನ್ನ ಹಾಗೆ ಮಾಡಿರೋ ನೀವೆಲ್ಲ ಸಂಭಾವಿತರು. ಆದ್ರೆ ಅವ್ಳು ಮಾತ್ರ ಸರಿಯಿಲ್ಲ, ನಡತೆಗೆಟ್ಟೋಳು ಅಲ್ವಾ?' ಎಂದೆ ಕೋಪದಿಂದ. 'ಬುದ್ಧಿ ಹೇಳಿದ್ರೆ ಛೀಮಾರಿ ಹಾಕ್ತಾಳಲ್ಲ ಈ ಹೆಣ್ಣು' ಅನ್ನಿಸಿರಬೇಕು. ಮತ್ತೆ ಅವನೇನೂ ಮಾತಾಡಲಿಲ್ಲ. ನಾನು ಮಾತು ಮುಂದುವರಿಸಲಿಲ್ಲ. ನನಗೆ ಈ ವ್ಯವಸ್ಥೆಯ ಬಗ್ಗೆ ಬೇಸರವಾಗುತ್ತದೆ. ಕೆಟ್ಟತನವನ್ನೆಲ್ಲ ಹೆಣ್ಣಿಗೆ ಕಟ್ಟಿ ಸಭ್ಯತೆ ತೋರುವ ಕೆಲವು ಗಂಡು ಜೀವಿಗಳ ಮೇಲೆ ತುಂಬಾ ಕೋಪಾನೂ ಬರುತ್ತದೆ. ಒಮ್ಮೊಮ್ಮೆ ನಮ್ಮ, ಅಂದರೆ ಹೆಂಗಸರ ಮೇಲೂ ಕೋಪಬರುತ್ತದೆ. 'ಆಕೆ ಯಾಕೆ ಕೆಟ್ಟು ಹೋದಳು' ಎಂಬುದನ್ನು ತಿಳಿಯದೆ ಮಾತಿಗೆ ಮುಂಚೆ 'ಸರಿಯಿಲ್ಲ' ಎಂದು ಸ್ಲೋಗನ್ ಹಾಡೋಕ್ಕೆ ಶುರುಮಾಡ್ತೀವಿ. 'ಆ ಹೆಣ್ಣು ಯಾಕೆ ಸರಿಯಿಲ್ಲ' ಎಂದು ಒಂದು ಬಾರಿಯೂ ಯೋಚನೆಯನ್ನೇ ಮಾಡಲ್ಲ ನಾವು.

ಜನರು ನನಗೆ ಈ ರೀತಿಯ ಬುದ್ಧಿವಾದ ಹೇಳುವುದು ಯಾರೋ ಮೂರನೆಯವರ ಬಾಯಿಂದ ಅವಳಿಗೆ ತಿಳಿದಿದೆ. ಅವಳು ಬೇಕೆಂತಲೇ ನನ್ನ ಬಳಿ ಮಾತು ಕಡಿಮೆ ಮಾಡಿದಾಗ, ನನಗೋ ಆಶ್ಚರ್ಯ. ನಾನೇನಾದ್ರೂ ಮತ್ತೆ ಅವಳ ಮೇಲೆ ಕೋಪ ಮಾಡ್ಕೊಂಡ್ನಾ? ಎಂದು. ಈಗ ಅವಳ ನಗುವಿನಲ್ಲಿ ನಾನೂ ಪಾಲುಗಾರ್ತಿಯಾಗಿ ಮನತುಂಬಿ ನಗುತ್ತಿದ್ದೆ. ನನ್ನ ಕೃತಕ ಗಾಂಭೀರ್ಯ ಕಡಿಮೆಯಾಗಿತ್ತಾದರೂ, ಪೂರಾ ಹೋಗಿರಲಿಲ್ಲ. ಎಲ್ಲ ಹೋಗಿಬಿಟ್ಟರೆ 'ನಾನು' ಎನ್ನುವ ಅಹಂ ಎಲ್ಲಿರುತ್ತೆ? 'ಯಾಕೆ ಸುಂದ್ರಿ ನನ್ನತ್ರ ಸರ್ಯಾಗಿ ಮಾತಾಡಲ್ಲ. ತಾವು ಸುಂದ್ರಿ ಅನ್ನೋ ಧಿಮಾಕಾ? ಇಲ್ಲ, ನಾನು ಚೆನ್ನಾಗಿಲ್ಲಾಂತ ತಾತ್ಸಾರನಾ?' ಎಂದು ಅವಳಂತೆ ಹಾಸ್ಯವಾಗಿ ಕೇಳಿದಾಗ, ಅವಳ ಕಣ್ಣು ತುಂಬಿತ್ತು. ಆ ಕಣ್ಣೀರನ್ನು ತಡೆಯಲು ಆ ಕಡೆ ಈ ಕಡೆ ನೋಡಿ ಪ್ರಯತ್ನಿಸುತ್ತಿದ್ದಳು. ನನಗಂತೂ